<u>ಬೊಳುವಾರು</u> ರವೀಂದ್ರ ಕುದ್ದಣ್ಣಾಯರ ಮನೆ 20-02-1999

ಅಜ್ಜ – ಓಂ ಅಸತೋಮಾ ಸದ್ಗಮಯ
ತಮಸೋಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂಗಮಯ

ಓಂ ಸಹನಾವವತು
ಸಹನೌ ಭುನಕ್ತು
ಸಹವೀರ್ಯಂ ಕರವಾವಹೈ
ತೇಜಸ್ವಿನಾವಧೀತಮಸ್ತು
ಮಾವಿದ್ವಿಷಾವಹೈ

ಶಾಂತ – ಅದರ ಅರ್ಥ ಹೇಳಿ.

ಅಜ್ಜ – ಅಸತ್ಯದಿಂದ ನನ್ನನ್ನು ಸತ್ಯದ ಕಡೆಗೆ ಕೊಂಡುಹೋಗು. ಕತ್ತಲೆಯಿಂದ ನನ್ನನ್ನು ಬೆಳಕಿನ ಕಡೆಗೆ ಕೊಂಡುಹೋಗು. ಮೃತ್ಯುವಿನಿಂದ ನನ್ನನ್ನು ಅಮೃತತ್ವದ ಕಡೆಗೆ ಕೊಂಡುಹೋಗು ಭಗವಾನ್. ಇದು ಬಂಧನಕ್ಕೊಳಪಟ್ಟ ಜೀವಾತ್ಮನ ಪ್ರಾರ್ಥನೆ. ಯಾಕಾಗಿ? ಬಂಧನದಿಂದ ಬಿಡುಗಡೆ ಹೊಂದಿ ಸ್ವತಂತ್ರನಾಗಲಿಕ್ಕಾಗಿ. ಆ್ಹಂ. ಸರಿ.

ಸೂಫಿ – ಅಯ್ಯೋ ಅಜ್ಜ, Singa a song.

ಶಾಂತ – ಹೇಳಿ ಅಜ್ಜ, ಒಂದು ಹಾಡು ಹೇಳು.

ಅಜ್ಜ – ಬಾ ಎಂದರೆ ಬರುವವನಲ್ಲ. ಹ. ಹ. ಹ.
ಪೋಗೆಂದರೆ ಪೋಗುವವನಲ್ಲ.
ಬಂದರೆ ಬಂದೆ ಪೋದರೆ ಪೋದೆ.

ಬಾ ಎಂದರೆ ಬರುವವನಲ್ಲ.
ಪೋಗೆಂದರೆ ಪೋಗುವವನಲ್ಲ.
ಬಂದರೆ ಬಂದೆ ಪೋದರೆ ಪೋದೆ.

ಯುಗಯುಗಯುಗದಲ್ಲಿsss ಬರುವವನಾರು?
ಯುಗದೊಳೂss ಧರ್ಮವ ಸಾರುವನಾರು?
ಈ ಕಲಿಯುಗದಲಿ ಅವ ಬಂದವನಾರು?
ಮುಂದೆ ಲೋಕಕೇss ಧರ್ಮವ ಸಾರುವನಾರು?
ಅವ ಬಂದವನಾರು ಇವ ಬಂದವನಾರು
ಅವ ಬಂದವನಾರು ಇವ ಬಂದವನಾರು

ಯುಗಯುಗಯುಗದಲಿsss ಬರುವವನಾರು?
ಯುಗದೊಳು ಧರ್ಮವ ಸಾರುವನಾರು?
ಕಲಿಯುಗದಲಿ ಅವ ಬಂದವನಾರು?
ಇವ ಬಂದವನಾರು ಮುಂದೆ ಲೋಕಕೆ ಧರ್ಮವ ಸಾರುವನಾರು?
ಓsss ಧರ್ಮವ ಸಾರುವನಾರು
ಅವ ಬಂದವನಾರು ಇವ ಬಂದವನಾರು

(ಎಲ್ಲರೂ ನಗುತ್ತಾ ಚಪ್ಪಾಳೆ ತಟ್ಟಿದರು).

ಸೂಫಿ – What's the meaning.

ರಾಮಭದ್ರ – ಕನ್ನಡದಲ್ಲಿ ಭಾಷಾಂತರಿಸಿದ.

ಅಜ್ಜ – ಆನಂದಮಯ ಜೀವನ
ಆನಂದಮಯ ಜೀವನ ಹ. ಹ. ಹ.

ಕೃಷ್ಣ ನಿನ್ನ ಸ್ಮರಣೆಯೊಂದೆ ಎನಗೆ ಅದುವೇss ಆನಂದಂ
ಆನಂದಂss ಆನಂದಂss ಆನಂದಾನಂದಾನಂದಂ
ಆನಂದಂ ಅದು ನಿತ್ಯಾನಂದಂ ಪರಮಾನಂದಂ ಬ್ರಹ್ಮಾನಂದಂ
ಅದುವೇ ಆನಂದಂ

ಓಂ ಶಿವ ಶಂಕರ ಓಂ ಶಿವ ಶಂಕರ ಓಂ ಶಿವ ಶಂಕರ ಓಂಕಾರ
ಓಂ ಶಿವ ಶಂಕರ ಓಂ ಶಿವ ಶಂಕರ ಓಂ ಶಿವ ಶಂಕರ ಓಂಕಾರ

ಶಂಕರ ನಿನ್ನಯ ಕಿಂಕರನಾದ ಶಂಕರಾss ಶಂಕರಾss
ಶಂಕರೀ ನಿನ್ನಯ ಕಿಂಕರನಾದ ಶಂಕರೀss ಶಂಕರೀsss

ತಾಯೆ ನಿನಗೆ ವಂದಿಪೆ ತಾಯೆ ನಿನಗೆ ವಂದಿಪೆ.
ಅಂಬಿಕೆ, ತ್ರಯಂಬಿಕೆ, ಮೂಕಾಂಬಿಕೆ

ತಾಯೆ ನಿನಗೆ ವಂದಿಪೆ ತಾಯೆ ನಿನಗೆ ವಂದಿಪೆ
ಅಂಬಿಕೆ ತ್ರಯಂಬಿಕೆ ಮೂಕಾಂಬಿಕೆ
ತಾಯೆ ನಿನಗೆ ವಂದಿಪೆ. ತಾಯೆss ನಿನಗೆ ವಂದಿಪೆ ಹ. ಹ. ಹ.

ರವೀಂದ್ರಣ್ಣ – ಭಾಷಾಂತರಿಸಿದರು.

*****